ಮಾನ್ಯ ಶಾಸಕರಿಗೆ ಗೊತ್ತಿದೆ. ಅಲ್ಲಿ ಹೂಳೆತ್ತುವಂತಹ ಕೆಲಸವು ಇತ್ತೀಚೆಗಷ್ಟೇ ಮುಗಿದಿರುವುದು. ಪುನಃ ಮೊನ್ನೆ ನೆರೆ ಬಂದಿರುವುದರಿಂದ ಅಲ್ಲಿ ಹೂಳು ತುಂಬಿಕೊಂಡಿದೆ, ಎಂದು ಮಾನ್ಯ ಸದಸ್ಯರು ನಮ್ಮ ಗಮನವನ್ನು ಹರಿಸಿದ್ದಾರೆ. ಇದರ ಬಗ್ಗೆ ಅತಿ ಶೀಘ್ರವಾಗಿ ಹೂಳನ್ನು ತೆಗೆಯುವಂತಹ ಕ್ರಮಗಳನ್ನು ಕೈಗೊಳ್ಳುತ್ತೇವೆ.

(ಕ) ಬಳ್ಳಾರಿ, ಕೊಪ್ಪಳ, ಗದಗ ಜಿಲ್ಲೆಗೆ ಸಂಬಂಧಿಸಿದಂತೆ ತುಂಗಭದ್ರಾ ಮಂಡಳಿಯವರು ಮೀನುಗಾರರನ್ನು ಒಕ್ಕಲೆಬ್ಬಿಸುತ್ತಿರುವುದನ್ನು ನಿಲ್ಲಿಸುವ ಬಗ್ಗೆ.

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪಾಧ್ಯಕ್ಷರೆ, ಬಳ್ಳಾರಿ, ಕೊಪ್ಪಳ ಹಾಗೂ ಗದಗ ಜಿಲ್ಲೆಗೆ ಸಂಬಂಧಪಟ್ಟಂತೆ 45 ಹಳ್ಳಿಗಳ ಬಡ ಮೀನುಗಾರರನ್ನು ಒಕ್ಕಲೆಬ್ಬಿಸುವ ಕಾರ್ಯ ತುಂಗಭದ್ರಾ ಮಂಡಳಿಯವರು ನಡೆಸುತ್ತಿದ್ದಾರೆ. ಸುಮಾರು 37,814 ತುಂಗಭದ್ರಾ ಕಾಯ್ದಿಟ್ಟ ಪ್ರದೇಶದಲ್ಲಿ ಆ 37,814 ಹೆಕ್ಟೇರ್ ಪ್ರದೇಶದಲ್ಲಿ ಅಲ್ಲಿ ಅಣೆಕಟ್ಟು ಕಟ್ಟಿದಾಗಿನಿಂದಲೂ ಕೂಡ ಬಡತನರೇಖೆಯಿಂದ ಕೆಳಗಿರತಕ್ಕಂತಹ ಮೀನುಗಾರರು ಕೇವಲ 6 ತಿಂಗಳಿಗೊಮ್ಮೆ ಅಲ್ಲಿ ಮೀನುಗಾರಿಕೆಯನ್ನು ಮಾಡಿಕೊಂಡು ಜೀವನವನ್ನು ಮಾಡುತ್ತಿದ್ದಾರೆ. ಈ ಪದ್ಧತಿಯು ಸುಮಾರು 40 ವರ್ಷಗಳಿಂದ ನಡೆದುಕೊಂಡು ಬಂದಿದೆ. ಆ ಮೀನುಗಾರರು ವರ್ಷಕ್ಕೆ 20 ರೂಗಳನ್ನು ಕೊಟ್ಟು ಲೈಸೆನ್ಸ್ ಪಡೆದುಕೊಂಡು ಮೀನುಗಾರಿಕೆ ಮಾಡುವಂತಹ ಸಂದರ್ಭದಲ್ಲಿ ಈಗ ಮೀನುಗಾರಿಕೆ ಇಲಾಖೆಯವರು ಕೊನೆಯಲ್ಲಿದ್ದಾರೆಂದು ಹೇಳಿ ಈ ತುಂಗಭದ್ರಾ ಮಂಡಳಿಯವರು ಯಾರು ಇದ್ದಾರೆ ಅವರಿಗೆ ವಾರ್ಷಿಕವಾಗಿ 9 ಲಕ್ಷರೂಗಳು ಖರ್ಚಾಗುತ್ತಿದೆ. ನಾವು ಅದನ್ನು ಆಕ್ಷನ್ ಮಾಡಿ ಟೆಂಡರ್ ಮಾಡಿ ಬೇರೆಯವರಿಗೆ ಕೊಡಬೇಕೆಂದು ಹೇಳಿ, ಇವತ್ತು ಆಂಧ್ರಪ್ರದೇಶದವರಿಗೆ ಆ ಮೀನುಗಾರಿಕೆಯ ಬಗ್ಗೆ ಟೆಂಡರ್‌ನ್ನು ಕರೆಸಿ ಕೊಟ್ಟಿದ್ದಾರೆ; ಇದರಲ್ಲಿ ಸುಮಾರು 5 ಸಾವಿರ ಕುಟುಂಬಗಳನ್ನು ಒಕ್ಕಲೆಬ್ಬಿಸುವ ಕಾರ್ಯಕ್ರಮ, 15 ಸಾವಿರ ಮೀನುಗಾರರು ಉಪವಾಸ ಬೀಳುವಂತಹ ಕಾರ್ಯಕ್ರಮವಾಗಿದೆ. ಸುಮಾರು 40 ವರ್ಷಗಳಿಂದ ಸುಮಾರು 20 ರೂ.ಗಳನ್ನು ಕೊಟ್ಟು ಮೀನುಗಾರಿಕೆಯನ್ನು ಮಾಡಲು ಅವಕಾಶವಿದ್ದಾಗ ಇವತ್ತು ಆಂಧ್ರಪ್ರದೇಶದವರಿಗೆ ಕಾಂಟ್ರ್ಯಾಕ್ಟ್‌ನ್ನು ಕೊಟ್ಟು ಅವರಿಗೆ ಅವಕಾಶವನ್ನು ಮಾಡಿಕೊಟ್ಟರೆ ನಾವು ಏನು ಮಾಡಬೇಕು.

ಶ್ರೀ ಕೆ.ಜಯಪ್ರಕಾಶ್‌ಹೆಗಡೆ (ಬಂದರು ಹಾಗೂ ಮೀನುಗಾರಿಕೆ ಸಚಿವರು): ಈ ತುಂಗಭದ್ರಾ ನದಿಯಲ್ಲಿ ಮೀನುಗಾರಿಕೆಯ ಪಾಶ್ವವಾರು ಹಕ್ಕನ್ನು, ನಾವು ಟೆಂಡರ್‌ನ್ನು ಕರೆದಿದ್ದೇವೆಂದು ಹೇಳುತ್ತಾರೆ ಅದು ಸರಿಯಲ್ಲ. ರಾಜ್ಯ ಸರ್ಕಾರದವರು ಟೆಂಡರ್‌ನ್ನು ಕರೆದಿಲ್ಲ. ಈ ಜಲಾಶಯದ ಭಾಗ ಏನು ಇದೆ. ಅದು ತುಂಗಭದ್ರಾ ಮಂಡಳಿಯ ಕೆಳಗಡೆ ಬರುತ್ತದೆ. ಅದಕ್ಕೆ ಕೇಂದ್ರಸರ್ಕಾರದ ಸೆಂಟ್ರಲ್ ವಾಟರ್ ಕಮೀಷನ್ನಿನ ಚೀಫ್ ಇಂಜಿನಿಯರ್‌ರವರು ಅಧ್ಯಕ್ಷರಾಗಿರುತ್ತಾರೆ. ಆಂಧ್ರದ ಒಬ್ಬ ಚೀಫ

ಇಂಜಿನಿಯರ್‌ರವರು ಇದ್ದಾರೆ. ಕರ್ನಾಟಕ ಒಬ್ಬ ಚೀಫ್ ಇಂಜಿನಿಯರು ಇದ್ದಾರೆ. ಆ ಮಂಡಳಿಯವರು ತೀರ್ಮಾನವನ್ನು ತೆಗೆದುಕೊಂಡು ಆಕ್ಷನ್ ಮಾಡಿರುವಂಥದ್ದು. ಅವರೇ ಮೀನುಮರಿ ಬಿಡುವಂತಹದು.

ಶ್ರೀ ಕಾಗೋಡು ತಿಮ್ಮಪ್ಪ: ತನ್ನಷ್ಟಕ್ಕೆ ಹಾಗೆ ಬೆಳೆದಿದ್ದನ್ನು ಇವರು ದೊಡ್ಡ ದಾದಾಗಿರಿ ಮಾಡುವುದಕ್ಕೆ ಹೊರಟ್ಟಿದ್ದಾರೆ.

ಉಪಾಧ್ಯಕ್ಷರು: ಉತ್ತರ ಮುಗಿಯುವರೆಗೆ ಕೇಳಿ.

ಶ್ರೀ ಕೆ.ಜಯಪ್ರಕಾಶ್‌ಹೆಗಡೆ: ಕೇಂದ್ರ ಸರ್ಕಾರದ ವಾಟರ್ ಕಮೀಷನ್ ಚೀಫ್ ಇಂಜಿನಿಯರವರು ಅಧ್ಯಕ್ಷರಾಗಿರುತ್ತಾರೆ. ಆ ಬೋರ್ಡಿನಲ್ಲಿ ತೀರ್ಮಾನವನ್ನು ತೆಗೆದುಕೊಂಡಿರುವಂತಹದು. ಆದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡುತ್ತೇನೆ. ಪ್ರತಿ ವರ್ಷ ಅವರು 84 ಲಕ್ಷ ಮೀನುಮರಿಗಳನ್ನು ಬಿಡುತ್ತಾರೆ. ಆ ಮೇಲೆ ಪ್ರತಿ ಮೀನುಗಾರರಿಗೆ ಲೈಸೆನ್ಸ್‌ನ್ನು ಕೊಡುತ್ತಾರೆ. ಈ ಸಾರಿ ಟೆಂಡರ್‌ನ್ನು ಕರೆದಿದ್ದಾರೆ. ಕಳೆದ ವರ್ಷ ಲೈಸೆನ್ಸ್‌ನ್ನು ಕೊಡುತ್ತಾರೆ. ಈ ಸಾರಿ ಟೆಂಡರ್‌ನ್ನು ಕರೆದಿದ್ದಾರೆ. ಕಳೆದ ವರ್ಷ ಲೈಸೆನ್ಸ್‌ನಲ್ಲಿ ಸಿಕ್ಕುವಂತಹದು ನಾಲ್ಕುವರೆ ಲಕ್ಷ ರೂಪಾಯಿಗಳು; ಎಂದು ಹೇಳಿತ್ತು. ಈಗ ಗುತ್ತಿಗೆಯನ್ನು ಕರೆದಾಗ ಅದು 45 ಲಕ್ಷ ರೂ.ಗೆ ಹೋಗಿದೆ. ಅಲ್ಲಿ ಒಂದು ಕಂಡೀಷನ್‌ನ್ನು ಹಾಕಿದ್ದಾರೆ. ನಾನು ನನಗೆ ಗೊತ್ತಿದ್ದ ಮಾಹಿತಿಯನ್ನು ತಮಗೆ ಕೊಡುತ್ತಿದ್ದೇನೆ. ಅವರು ಗುತ್ತಿಗೆಯನ್ನು ತೆಗೆದುಕೊಂಡವರಿಗೆ ಏನು ಕಂಡೀಷನ್ ಹಾಕಿದ್ದಾರೆ ಎಂದರೆ ಮೀನು ಹಿಡಿದ್ದಿದ್ದರಲ್ಲಿ ಶೇಕಡ 50 ಮೀನುಗಾರರಿಗೆ, 50 ಗುತ್ತಿಗೆಯನ್ನು ತೆಗೆದುಕೊಂಡವರಿಗೆ ಕೊಡುತ್ತಾರೆ. ಇದರಲ್ಲಿ ಇಬ್ಬರಿಗೂ ಸಮಪಾಲು ಸಿಗುತ್ತದೆ. ಈಗ ಬೋಟು ಮೀನುಗಾರಿಕೆಗೆ ಹೋದಾಗ ಏನು ಬೋಟಿನ ಮಾಲೀಕರಿಗೆ 60 ಪರ್ಸೆಂಟ್, ಹಿಡಿದವರಿಗೆ 40 ಪರ್ಸೆಂಟ್ ಇದೆ, ಆ ರೀತಿಯಲ್ಲಿ ಇವರು ಶೇಕಡ 50-50 ಮಾಡಿಕೊಂಡಿದ್ದಾರೆ. ಆದರ ಜೊತೆಗೆ ಇನ್‌ಷ್ಯೂರೆನ್ಸ್ ಹಾಗೂ ಬೇರೆ ಬೇರೆ ಇತರೆ ಸೌಕರ್ಯಗಳನ್ನು ಕೊಡುವ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇದರಿಂದ ಅಭಿಪ್ರಾಯ ಏನಾಗುತ್ತದೆಂದರೆ ಉತ್ಪಾದನೆಯೂ ಜಾಸ್ತಿಯಾಗುತ್ತದೆ. ಮೀನುಗಾರರಿಗೂ ಲಾಭ ಜಾಸ್ತಿಯಾಗುತ್ತದೆ. ಈ ಒಂದು ಸಲ ಅವರು ಒಂದು ಎಕ್ಸ್‌ಪೆರಿಮೆಂಟ್‌ನ್ನು ಮಾಡಬೇಕೆಂದು ಮಂಡಳಿಯವರು ತೀರ್ಮಾನವನ್ನು ತೆಗೆದುಕೊಂಡಿರುವಂಥದ್ದು. ಅದೇನಾದರೂ ಸರಿಯಾಗದಿದ್ದರೆ ಬರುವ ವರ್ಷದಿಂದ ಅದನ್ನು ಕ್ಯಾನ್ಸಲ್ ಮಾಡಿಸಲಿಕ್ಕೆ ಪ್ರಯತ್ನವನ್ನು ಮಾಡಬಹುದೆಂದು ಕಾಣಿಸುತ್ತದೆ. ಒಂದು ವೇಳೆ ಈ ಪ್ರಯೋಗ ಯಶಸ್ವಿದಾಯಕ ಆಗುವುದಾದರೆ, ಪ್ರಾಯಶಃ ಮೀನುಗಾರರಿಗೆ ಲಾಭದಾಯಕವಾಗುವುದಾದರೆ ಏಕೆ ಬೇಡ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಭಾಪತಿಯವರು ಎತ್ತಿರುವಂತಹ ವಿಷಯ,

ನಾವು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿಯೂ ಕೂಡ ಚರ್ಚೆಯಾಯಿತು. ಅಲ್ಲಿರುವಂತಹ ಮೀನುಗಾರರಲ್ಲಿ ಎರಡು ಭಾಗ ಇದೆ. ನಾವು ಮೀನುಗಾರರ ಪರವಾಗಿ ನಿಲ್ಲುತ್ತೇವೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಮೀನುಗಾರರ ಸಂಘ ಎನ್ನತಕ್ಕದ್ದು ಕೂಡ ಮೊದಲಿನಿಂದಲೂ ಆಂಧ್ರಪ್ರದೇಶದಿಂದ ಬರತಕ್ಕಂಥ; ವೈಜಾಕ್‌ದವರೇ ವ್ಯಾಪಾರವನ್ನು ಮಾಡುತ್ತಾ ಇದ್ದರು. ನಮ್ಮವರನ್ನು ಎಷ್ಟು ಕಷ್ಟದಲ್ಲಿ ಇಡಬಹುದೋ ಅಷ್ಟು ಕಷ್ಟದಲ್ಲಿಟ್ಟಿದ್ದರು. ಒಂದು ಸೇವಾ ಸಹಕಾರ ಸಂಘವನ್ನು ಮಾಡಿದ್ದೇವೆಂದ ತಕ್ಷಣವೇ, ಆ ಸಹಕಾರ ಸಂಘದ ಹೆಸರಿನ ಮೇಲೆ ಮೀನುಗಾರರನ್ನು ಶೋಷಣೆ ಮಾಡತಕ್ಕಂತಹ ವ್ಯವಸ್ಥೆ ಇವತ್ತಿನದಲ್ಲ. ಮೊದಲಿನಿಂದಲೂ ಕೂಡ ನಡೆದುಕೊಂಡು ಬಂದಿದೆ. ಇದರ ಇಡೀ ವ್ಯಾಪಾರ ಆಂಧ್ರ ಪ್ರದೇಶದಲ್ಲಿರತಕ್ಕಂತಹ ಗುಂಟೂರಿನವರಿಗೆ ಮತ್ತು ವೈಜಾಕ್‌ದವರಿಗೆ ಸೇರಿರತಕ್ಕಂತದ್ದು ಆಗಿದೆ. ಅದನ್ನೆಲ್ಲಾ ಕಂಡುಹಿಡಿದು ಮಂಡಳಿಯವರು ಏನು ಹೇಳಿದರೆಂದರೆ 8 ಲಕ್ಷ ಅಥವಾ 9 ಲಕ್ಷ ರೂ.ಗಳು ನಮಗೆ ಖರ್ಚು ಬರುತ್ತದೆ. 8 ಲಕ್ಷ ರೂಪಾಯಿಗಳನ್ನು ಲೈಸೆನ್ಸ್ ಫೀ ಕಟ್ಟಬೇಕೆಂದಾಗ ಇವರು 8 ಲಕ್ಷ ರೂಗಳನ್ನು ಕಟ್ಟಲಿಕ್ಕೂ ಸಹ ತಯಾರಾಗಿದ್ದರು. ಆ ಸಂದರ್ಭದಲ್ಲಿ ಕೆಲವು ಮೀನುಗಾರರ ಸಂಘದವರು ಮತ್ತು ಅಲ್ಲಿಯ ಕಾಂಗ್ರೆಸ್ ಪಕ್ಷದ ಯುವಸಂಘದ ಅಧ್ಯಕ್ಷರು ಬಂದಿದ್ದರು. ಅವರೆಲ್ಲರೂ ಬಂದು ಮನವಿಗಳನ್ನು ಜಾರ್ಜ್‌ಫರ್ನಾಂಡಿಸ್‌ರವರಿಗೆ ಮಾನ್ಯ ಸಿದ್ಧರಾಮಯ್ಯನವರಿಗೆ ಮತ್ತು ನನಗೆ ಮತ್ತು ಹೆಚ್.ಜಿ.ರಾಮುಲುರವರಿಗೆ ಕೊಟ್ಟರು. ಅವರು ಕೊಟ್ಟ ಮೇಲೆ ನಾವು ಪ್ರಯತ್ನವನ್ನು ಮಾಡಿ ಅವರನ್ನು ಹಾಗೂ ಬೋರ್ಡಿನ ಛೇರ್ಮನ್‌ರವರನ್ನು ಕರೆಸಿ ಆದಷ್ಟು ಮಟ್ಟಿಗೆ ಇದನ್ನು ಬಗೆಹರಿಸುವಂತಹ ಕೆಲಸವನ್ನು ಮಾಡಿ ಎಂದು ಹೇಳಿದ್ದೇವೆ. ಅದಲ್ಲದೆ ಕರ್ನಾಟಕದಿಂದ ನಾಮನಿರ್ದೇಶಿತನಾಗಿರತಕ್ಕಂತಹ ನಮ್ಮ ಚೀಫ್ ಇಂಜಿನಿಯರ್ ಅವರು ಇದು ಸರಿಯಾದುದಲ್ಲ. ನಮ್ಮ ಮೀನುಗಾರರಿಗೆ ಅನುಕೂಲವಾಗಬೇಕೆನ್ನುವ ರೀತಿಯಲ್ಲಿ ತಾವು ಆ ಬೋರ್ಡಿನಲ್ಲಿ ಮಾತನಾಡಬೇಕೆನ್ನುವ ವಿಷಯವನ್ನು ಸಹ ತಿಳಿಸಿದ್ದೇವೆ. ಮಾನ್ಯ ನಮ್ಮ ಮಂತ್ರಿಗಳು ಹೇಳಿದಂತೆ ಆ ಮೀನನ್ನು ಬಿಡತಕ್ಕವರು ಆ ಬೋರ್ಡಿನವರೇ. ಅದರಲ್ಲಿ ನಮ್ಮದೇ ಆಗಿರತಕ್ಕಂತಹ ವ್ಯಾಪ್ತಿಯಿಲ್ಲ. ಮೊದಲಿನಿಂದಲೂ ಈ ಬೋರ್ಡ್ ಎನ್ನುವಂತಹದು ಯಾವುದೋ ಒಂದು ಐತಿಹಾಸಿಕ ಕಾರಣಕ್ಕಾಗಿ ರಚನೆಯಾಗಿದೆ. ಇದು ಒಂದು ಬಳಿಯ ಆನೆಯಾಗಿದೆ. ಆದ್ದರಿಂದ ಅಂತರಜಲದ ವಿಚಾರದಲ್ಲಾಗಲಿ, ಅಂತರರಾಜ್ಯದ ಬಗ್ಗೆ ಇರತಕ್ಕ ದೊಡ್ಡ ವಿಧ ಇಲ್ಲ. ಆ ಬೋರ್ಡ್‌ನ್ನು ತೆಗೆದು ಹಾಕಿ ಎಂದು ಶ್ರೀ ಎ.ಜಿ.ರಾಮಚಂದ್ರರಾವ್‌ರವರು ಕಮಿಟಿಯ ರಿಪೋರ್ಟ್ ಸಹ ಇದೆ. ಅದರ ಪ್ರಕಾರ ನಾವು ಕೇಂದ್ರಸರ್ಕಾರಕ್ಕೆ ಕೂಡ ಮನವಿ ಮಾಡಿದ್ದೇವೆ.

ಶ್ರೀ ಕಾಗೋಡುತಿಮ್ಮಪ್ಪ: ಅವರೇ ಮೀನುಮರಿ ಬಿಟ್ಟಿದ್ದಾರಾ? ಇದೆಲ್ಲಾ ಸತ್ಯಕ್ಕೆ ದೂರವಾದುದು. ನೀವು ಮೀನುಮರಿ ಬಿಡಿರಿ.

ಶ್ರೀ ಎಂ.ಪಿ.ಪ್ರಕಾಶ್: ನೀವು ಹೇಳಿದಂತೆ ಆಗುವುದನ್ನು ನಾನು ಸ್ವಾಗತ ಮಾಡುತ್ತೇನೆ. ನೀವು ಹೇಳಿದಂತೆ ಇಡೀ ಅದು ನಮ್ಮ ಅಧೀನದಲ್ಲಿ ಬರಬೇಕೆಂದು ನಮ್ಮ ಪ್ರತಿಪಾದನೆ. ಆದರೆ ಇವತ್ತಿನವರೆಗೂ ಕೂಡ ಅದು ಬೋರ್ಡ್ ಅಧೀನದಲ್ಲಿ ಬರುತ್ತದೆ. ಮೀನು ಬರತಕ್ಕದ್ದು ಅದರ ಅಧೀನ. ಸೈಟು ಕೊಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿರತಕ್ಕ ಗುಡಿಸಲುಗಳ ಕವರ್ ಕಿತ್ತುಹಾಕಿದರೆ ನಮ್ಮ ರಾಜ್ಯಸರ್ಕಾರದ ಕಾಯಿದೆಯನ್ನು ಅವರು ಮನ್ನಿಸುವುದಿಲ್ಲ. ನಾವು ನಮ್ಮ ಬೋರ್ಡ್‌ನಲ್ಲಿ ನಿರ್ಣಯ ಮಾಡಿದ್ದೇವೆ, ತಾವು ಗುಡಿಸಲುಗಳನ್ನು ಕಿತ್ತುಹಾಕಬಾರದೆಂದು ಹೇಳುತ್ತಾರೆ. ಅದನ್ನು ತಪ್ಪಿಸಬೇಕೆಂದು ನಿರಂತರ ಪ್ರಯತ್ನ ನಡೆದಿದೆ. ಮಾನ್ಯ ಸಭಾಪತಿಯವರು ಎತ್ತಿರತಕ್ಕ ವಿಷಯ ಬಹಳ ಸಮಂಜಸವಾಗಿರುವುದರಿಂದ ನಾವು ಮಾನ್ಯ ಜಾರ್ಜ್‌ಫರ್ನಾಂಡೀಸ್‌ರವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಮಾತನಾಡಿರಬಹುದು. ಈ ವಿಷಯದ ಬಗ್ಗೆ ಜಾರ್ಜ್‌ಫರ್ನಾಂಡೀಸ್‌ರವರ ಜೊತೆಯಲ್ಲಿ ನೀವು ದಯವಿಟ್ಟು ಬೋರ್ಡ್ ಛೇರ್ಮನ್‌ರವರಿಗೆ ಈ ತರಹ ನಿರ್ಣಯ ತೆಗೆದುಕೊಳ್ಳಬೇಡಿಯೆಂದು ಹೇಳಿಯೆಂದು ಹೇಳಿದ್ದೇವೆ.

(ಖ) ಪುತ್ತೂರು ತಾಲ್ಲೂಕಿನ ಸರ್ವೆಯಲ್ಲಿರುವ ಖಾಸಗಿ ಪ್ರೌಢಶಾಲೆಗೆ ಆಡಳಿತಾಧಿಕಾರಿ ನೇಮಿಸುವ ಬಗ್ಗೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಉಪಾಧ್ಯಕ್ಷರೆ, ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ವೆ ಎಂದು ಹೇಳುವಲ್ಲಿ ಒಂದು ಖಾಸಗಿ ಪ್ರೌಢಶಾಲೆ ಇದೆ. ಆ ಪ್ರೌಢಶಾಲೆಯ ಆಡಳಿತಮಂಡಳಿಯ ಒಳಜಗಳದಿಂದ ಆ ಶಾಲೆಯು ಒಂದೆರಡು ತಿಂಗಳಿಂದ ಪೂರ್ತಿ ತೊಂದರೆಗೆ ಒಳಗಾಗಿದೆ. ಅದು ಎಲ್ಲಿಯವರೆಗೆ ಹೋಗಿದೆಯೆಂದರೆ ದಿನಾಂಕ 6-11-98ಕ್ಕೆ ಆ ಶಾಲೆಯಲ್ಲಿ ಬಾವಿಯಿದೆ. ಸುಮಾರು 300ಮಕ್ಕಳು ಆ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಆ ಶಾಲೆಯ ಬಾವಿಗೆ ವಿಷ ಹಾಕುವ ಕೆಲಸವನ್ನು ಆಡಳಿತ ಮಂಡಳಿಯ ಒಳಜಗಳದಿಂದ ಮಾಡಲಾಗಿದೆ. ಆ ಶಾಲೆಯಲ್ಲಿರುವಂತಹ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಬರುವಂತಹ ಸಂಗತಿಯಾಗಿದೆ. ನಾನು ದಿನಾಂಕ 7-11-98ರಂದು ಆ ಶಾಲೆಗೆ ಭೇಟಿ ಮಾಡಿದ್ದೆ. ಎಲ್ಲಿಯವರೆಗೆ ಆಗಿದೆ ಅಂದರೆ ಆ ಬಾವಿಯಲ್ಲಿದ್ದ ಮೀನುಗಳು ಸತ್ತು ವಾಸನೆ ಬರುವಂತಹ ಹಂತದಲ್ಲಿ ಎಲ್ಲಾ ವ್ಯವಸ್ಥೆ ಇದೆ. ಇಡೀ ಊರಿನ ಜನರಿಗೆ ಮಾನಸಿಕವಾಗಿ ವೇದನೆಯಾಗಿದೆ. ನಮ್ಮ ಮಕ್ಕಳ ಭವಿಷ್ಯದ ಜೊತೆ, ಅವರ ಜೀವದ ಜೊತೆ ಚೆಲ್ಲಾಟವಾಡುತ್ತಾರೆಂದು. ಈ ಆಡಳಿತ ಮಂಡಳಿ ಇರುವವರೆಗೆ ತೊಂದರೆಯಾಗುವುದು ಇವರಿಗೆ. ತಕ್ಷಣ ಮಾನ್ಯ ಗೋವಿಂದೇಗೌಡರು ಹಿರಿಯ ಸಚಿವರು ಇದ್ದಾರೆ. ಆಡಳಿತ ಮಂಡಳಿಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಬೇಕು, ತಕ್ಷಣ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಿ ಆ ಮಕ್ಕಳ ಭವಿಷ್ಯ ಮತ್ತು